**ಓ ಎಸ್ ನಂ. 9/2021 ಡಿ ಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 23.04.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎನ್ ಎಂ ಜಿ ವಕೀಲರಿಂದಃ**

ನಿಶಾನೆ ಡಿ 28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲುಪಟ್ಟಿ ಆದ ಸಮಯದಲ್ಲಿ ನನ್ನ ತಾತ ತೀರಿಕೊಂಡಿದ್ದರು, ನನ್ನ ಅಜ್ಜಿ ಸಣ್ಣಮ್ಮ ಬದುಕಿದ್ದರು. ಆ ಪಾಲುಪಟ್ಟಿಗೆ ನನ್ನ ಅಜ್ಜಿ ಸಣ್ಣಮ್ಮ ಸೇರಿದ್ದರು. ಯಾವ ಸ್ವತ್ತುಗಳನ್ನು ಯಾವ ಕಾರಣಕ್ಕಾಗಿ ಪಾಲು ಮಾಡಿಕೊಳ್ಳಲಾಗುತ್ತದೆ ಎಂದು ನಿಶಾನೆ ಡಿ 28 ರ ಪಾಲು ಪಟ್ಟಿಯಲ್ಲಿ ಬರೆದಿದೆ. ಸದರಿ ಪಾಲುಪಟ್ಟಿಯಲ್ಲಿ ಸಣ್ಣಮ್ಮನ ಸ್ವತ್ತುಗಳು ಸೇರಿವೆ. ಸಣ್ಣಮ್ಮನ ಆಸ್ತಿಗಳನ್ನು ಸೇರಿಸಿ ಪಾಲುಪಟ್ಟಿ ಮಾಡಿಕೊಳ್ಳಲು ಸಮ್ಮತಿ ನೀಡಿರುವ ಬಗ್ಗೆ ನನ್ನ ಅಜ್ಜಿ ಸಣ್ಣಮ್ಮನ ಸಹಿಯು ಸದರಿ ಪಾಲುಪಟ್ಟಿಯಲ್ಲಿ ಇಲ್ಲ. ನಿಶಾನೆ ಡಿ 22 ರಲ್ಲಿರುವ ಪಾಲುಪಟ್ಟಿಯು ನನ್ನ ಅಜ್ಜಿ ಸಣ್ಣಮ್ಮ, ತಾತ ಕರೀಗೌಡ ಹಾಗೂ ಕುಟುಂಬದವರು ಸೇರಿ ಮಾಡಿಕೊಂಡಿರುವ ಪಾಲುಪಟ್ಟಿ ಎಂದರೆ ಸರಿ, ಸಾಕ್ಷಿ ಮುಂದುವರಿದು ಅದು ಮೊದಲನೇ ಪಾಲುಪಟ್ಟಿ ಎಂದು ಹೇಳುತ್ತಾರೆ. ಕೆಲವು ಸ್ವತ್ತುಗಳನ್ನು ಬಿಟ್ಟಿರುವ ಬಗ್ಗೆ ಮತ್ತು ಆ ಸ್ವತ್ತುಗಳನ್ನು ಮುಂದೆ ಪಾಲು ಮಾಡಿಕೊಳ್ಳುವ ಬಗ್ಗೆ ನಿಶಾನೆ ಡಿ 22 ರ ಪಾಲುಪಟ್ಟಿಯಲ್ಲಿ ನಮೂದಿಸಿಲ್ಲ. 2 ನೇ ಪಾಲುಪಟ್ಟಿಯಲ್ಲಿ ಇರುವ 3 ಆಸ್ತಿಗಳು ನಿಶಾನೆ ಡಿ 22 ರಲ್ಲಿನ ಮೊದಲನೇ ಪಾಲುಪಟ್ಟಿಯ ಸಮಯದಲ್ಲಿ ಆಸ್ತಿತ್ವದಲ್ಲಿ ಇರಲಿಲ್ಲ. 2 ನೇ ಪಾಲುಪಟ್ಟಿಯಲ್ಲಿರುವ ಸರ್ವೆ ನಂ. 63/2 ರಲ್ಲಿನ 0.39 ಗುಂಟೆ ಸ್ವತ್ತನ್ನು ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪಂದಿರು ಸೇರಿ ಬೇರೆಯವರಿಂದ ವರ್ಗಾವರ್ಗಿ ಮೂಲಕ ಪಡೆದುಕೊಂಡಿದ್ದರು. ಯಾವ ಜಮೀನನ್ನು ನೀಡಿ ಸರ್ವೆ ನಂ. 63/2 ರಲ್ಲಿನ 0.39 ಗುಂಟೆ ಜಮೀನನ್ನು ನಮ್ಮ ತಂದೆ ಹಾಗೂ ಚಿಕ್ಕಪ್ಪಂದಿರು ಪಡೆದುಕೊಂಡಿರುವುದು ನನಗೆ ಗೊತ್ತಿಲ್ಲ. ಆ ಜಮೀನಿನ ಬಗ್ಗೆ ತಿಳಿದುಕೊಳ್ಳಲು ನಾನು ಪ್ರಯತ್ನಿಸಲಿಲ್ಲ. ಸರ್ವೆ ನಂ. 63/2 ರಲ್ಲಿನ 0.39 ಗುಂಟೆ

ಜಮೀನನ್ನು  ವರ್ಗಾವರ್ಗಿ ಮೂಲಕ ಪಡೆದುಕೊಳ್ಳುವಾಗ ನೀಡಿರುವ ಜಮೀನು ನನ್ನ ಚಿಕ್ಕಪ್ಪಂದಿರಾದ ವೆಂಕಟೇಶ ಹಾಗೂ ನಾಗರಾಜೇಗೌಡರವರು ಕ್ರಯಕ್ಕೆ ಪಡೆದುಕೊಂಡಿರುವ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ವಿಭಾಗ ಆಗುವುದಕ್ಕಿಂತ ಮೊದಲೇ ಆ ಜಮೀನನ್ನು ಒಟ್ಟು ಕುಟುಂಬದ ಆದಾಯದಿಂದ ತಮ್ಮ ಚಿಕ್ಕಪ್ಪಂದಿರಾದ ವೆಂಕಟೇಶ್ ಹಾಗೂ ನಾಗರಾಜೇಗೌಡರ ಹೆಸರಿನಲ್ಲಿ ಕ್ರಯಕ್ಕೆ ಪಡೆದುಕೊಳ್ಳಲಾಗಿತ್ತು ಎಂದು ಹೇಳುತ್ತಾರೆ.  ನಮ್ಮ ಚಿಕ್ಕಪ್ಪಂದಿರಾದ ವೆಂಕಟೇಶ್ ಹಾಗೂ ನಾಗರಾಜೇಗೌಡರು ನಮ್ಮ ತಂದೆಯಾದ ಸಿ ಕೆ ದೇವೇಗೌಡರಿಂದ ತಲಾ ರೂ. 20 ಸಾವಿರ ಪಡೆದುಕೊಂಡು ತಮ್ಮ ಹಕ್ಕು ಬಿಡುಗಡೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನಿಶಾನೆ ಡಿ 28 ರಲ್ಲಿನ ದಿನಾಂಕ 10.09.1986 ರ ಪಾಲುಪಟ್ಟಿಯಡಿ ಸರ್ವೆ ನಂ. 63/2 ವಿಸ್ತೀರ್ಣ 0.39 ಗುಂಟೆ ಜಮೀನನ್ನು ನಮ್ಮ ತಂದೆ  ಸಿ ಕೆ ದೇವೇಗೌಡರಿಗೆ ನೀಡಲಾಗಿದೆ ಎಂದು ತೋರಿಸಿರುವಾಗ ಅದೇ ಜಮೀನಿಗೆ ಸಂಬಂಧಿಸಿದಂತೆ ನನ್ನ ಚಿಕ್ಕಪ್ಪಂದಿರಾದ ವೆಂಕಟೇಶ್ ಹಾಗೂ ನಾಗರಾಜೇಗೌಡರು 2005 ರಲ್ಲಿ ಹಕ್ಕು ಬಿಡುಗಡೆ ಪತ್ರ ಬರೆದುಕೊಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 2005 ರಲ್ಲಿ ಸರ್ವೆ ನಂ. 63/2 ರಲ್ಲಿನ 0.39 ಗುಂಟೆ ಜಮೀನಿನಲ್ಲಿ ಪೆಟ್ರೋಲ್ ಬಂಕ್ ನ್ನು ಸ್ಥಾಪಿಸಲು ಹೊರಟಾಗ ಕಂಪನಿಯವರು ನೋಂದಾಯಿತ ದಾಖಲೆಯನ್ನು ಹಾಜರುಪಡಿಸುವಂತೆ ಹೇಳಿದ್ದರಿಂದ ತಮ್ಮ ಚಿಕ್ಕಪ್ಪಂದಿರಿಬ್ಬರು ತಲಾ ರೂ. 20 ಸಾವಿರ ಹಣ ಪಡೆದು ಸದರಿ ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟರು ಎಂದು ಹೇಳುತ್ತಾರೆ. ನೋಂದಾಯಿತ ದಾಖಲೆಯ ಅವಶ್ಯಕತೆ ಇರುವ ಕಾರಣ ಹಕ್ಕು ಬಿಡುಗಡೆ ಪತ್ರವನ್ನು ನಿಶಾನೆ ಡಿ  28 ರಲ್ಲಿನ ಪಾಲುಪಟ್ಟಿಯ ನಂತರ ಬರೆದುಕೊಡಲಾಗಿದೆ ಎಂದು ನಿಶಾನೆ ಪಿ 10 ರಲ್ಲಿ ಹೇಳಲು ಯಾವುದೇ ತೊಂದರೆ ಇರಲಿಲ್ಲ.

6 ನೇ ಪ್ರತಿವಾದಿಯಾದ ನಾಗರಾಜೇಗೌಡರು ಸರ್ವೆ ನಂ. 72 ರಲ್ಲಿ 0.20 ಗುಂಟೆ ಜಮೀನನ್ನು ಸ್ವಯಾರ್ಜಿತವಾಗಿ ಕ್ರಯಕ್ಕೆ ಪಡೆದುಕೊಂಡಿದ್ದರು ಎಂದರೆ ಒಟ್ಟು

ಕುಟುಂಬದಲ್ಲಿ ಇದ್ದಾಗ ಅವರ ಹೆಸರಿಗೆ ಖರೀದಿ ಮಾಡಲಾಗಿತ್ತು. ಅವಿಭಕ್ತ ಕುಟುಂಬದ ಪರವಾಗಿ 6 ನೇ ಪ್ರತಿವಾದಿ ಹೆಸರಿಗೆ ಆ ಜಮೀನನ್ನು ಕ್ರಯಕ್ಕೆ ಪಡೆಯಲಾಗಿತ್ತು ಎಂದು ತೋರಿಸಲು ನಿಶಾನೆ ಡಿ 22 ರಲ್ಲಿನ ಪಾಲುಪಟ್ಟಿಯಲ್ಲಿ ಉಲ್ಲೇಖ ಇದೆ. ನಮ್ಮ ತಂದೆಯು ಒಟ್ಟು ಕುಟುಂಬದ ಆದಾಯದಿಂದ ತಮ್ಮ ತಮ್ಮಂದಿರ ಹೆಸರಿಗೆ ಕ್ರಯಪತ್ರಗಳನ್ನು ಬರೆಸಿರುವ ಸಂಬಂಧ ಯಾವುದೇ ದಾಖಲೆ ಇಲ್ಲ. ಸದರಿ ಜಮೀನನ್ನು ಹಾರೋಹಳ್ಳಿ ಗ್ರಾಮದ ದ್ಯಾವೇಗೌಡರ ಮಕ್ಕಳಾದ ರಾಮೇಗೌಡ, ನಾರಾಯಣಗೌಡ ಮತ್ತು ಮೋಟೇಗೌಡನ ಮಗ ನಾರಾಯಣಗೌಡರವರಿಗೆ ನೀಡಿ ಅವರಿಂದ ಸರ್ವೆ ನಂ. 24/2 ನ್ನು ವಿಸ್ತೀರ್ಣ 0.46 ಗುಂಟೆ ಜಮೀನನ್ನು ವರ್ಗಾವರ್ಗಿ ಮೂಲಕ ಪಡೆದುಕೊಂಡರು ಎಂದರೆ ಸರಿ.

ನಿಶಾನೆ ಡಿ 15 ರ ರೀತ್ಯಾ ಸರ್ವೆ ನಂ. 230 ವಿಸ್ತೀರ್ಣ 0.15 ಗುಂಟೆ ಜಮೀನು 6 ನೇ ಪ್ರತಿವಾದಿ ನಾಗರಾಜೇಗೌಡರವರ ಸ್ವಯಾರ್ಜಿತ ಸ್ವತ್ತು ಎಂದರೆ ಸದರಿ ಜಮೀನನ್ನು ಒಟ್ಟು ಕುಟಂಬದಲ್ಲಿದ್ದಾಗ ನಾಗರಾಜೇಗೌಡರ ಹೆಸರಿನಲ್ಲಿ ಕ್ರಯಕ್ಕೆ ಪಡೆದುಕೊಳ್ಳಲಾಗಿದೆ. ಸದರಿ ಸ್ವತ್ತನ್ನು ನಾಗರಾಜೇಗೌಡರು ಚನ್ನೇಗೌಡರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ.

ವಾದಿ ವೆಂಕಟೇಶರವರು ತಮ್ಮ ಸ್ವಯಾರ್ಜಿತ ಸ್ವತ್ತನ್ನು ನಿಶಾನೆ ಡಿ 8 ರಡಿ ಬಿ ಜಿ ಗೋಪಾಲ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಮಾರಾಟ ಮಾಡಿರುವುದು ನಿಜ, ಆದರೆ ಆ ಸ್ವತ್ತು ವೆಂಕಟೇಶ್ ರವರ ಸ್ವಯಾರ್ಜಿತ ಸ್ವತ್ತು ಅಲ್ಲ. ಆ ಸ್ವತ್ತು ಜಂಟಿ ಕುಟುಂಬದ ಸ್ವತ್ತು ಎಂದು ತೋರಿಸಲು ಪಾಲುಪಟ್ಟಿಯಲ್ಲಿ ನಮೂದು ಮಾಡಿಲ್ಲ. ನಿಶಾನೆ ಡಿ 8 ಕ್ಕೆ ನಮ್ಮ ತಂದೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಸರಿ. ನಿಶಾನೆ ಡಿ 8 ಎ ನಮ್ಮ ತಂದೆಯ ಸಹಿ ಎಂದರೆ ಸರಿ. ಸದರಿ ಸ್ವತ್ತನ್ನು ಜಂಟಿ ಕುಟುಂಬದ ಆದಾಯದಿಂದ ವಾದಿ ವೆಂಕಟೇಶ್ ರವರ ಹೆಸರಿನಲ್ಲಿ ಕ್ರಯಕ್ಕೆ ಪಡೆಯಲಾಗಿತ್ತು ಎಂದು ನಿಶಾನೆ ಡಿ 8 ರಲ್ಲಿ ತೋರಿಸಲು ಬರುವುದಿಲ್ಲ. ನಿಶಾನೆ ಡಿ 8, 14, 15, ರಲ್ಲಿನ ಕ್ರಯಪತ್ರಗಳಲ್ಲಿ ನಿಶಾನೆ ಡಿ

28 ರಲ್ಲಿನ ಪಾಲುಪಟ್ಟಿಯ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ಈ ಮೇಲ್ಕಂಡ ಕ್ರಯಪತ್ರಗಳಲ್ಲಿ ನಿಶಾನೆ ಪಿ 28 ರಲ್ಲಿನ ಪಾಲುಪಟ್ಟಿಯ ಬಗ್ಗೆ ಉಲ್ಲೇಖ ಇಲ್ಲದೆ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ 28 ರಲ್ಲಿನ ಪಾಲುಪಟ್ಟಿಯನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೆವೆಯೇ ಹೊರತು ಸದರಿ ಪಾಲುಪಟ್ಟಿಗೆ ವಾದಿಯಾಗಲೀ, 6 ನೇ ಪ್ರತಿವಾದಿಯಾಗಲೀ ಸಹಿ ಮಾಡದೆ ಇದ್ದರೂ ಸಹ ನಾವು ಪತ್ರ ಬರಹಗಾರರೊಂದಿಗೆ ಷರೀಕ್ಕಾಗಿ ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಕಾರಣದಿಂದಾಗಿಯೇ ನಾನು ಸದರಿ ಪಾಲುಪಟ್ಟಿಯ ಮೂಲ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಮೂಲ ದಾಖಲೆಯನ್ನು LAC No. 4/2013 ರಲ್ಲಿ ಹಾಜರುಪಡಿಸಿದ್ದೇನೆ. LAC No.4/2013 ರಲ್ಲಿ ಸರ್ಕಾರಿ ಅಧಿಸೂಚನೆಯು ನನ್ನ ಅಜ್ಜಿ ಸಣ್ಣಮ್ಮರವರ ಹೆಸರಿನಲ್ಲಿ ಬಂದಿದೆ. ಸದರಿ LAC No. 4/2013 ರಲ್ಲಿ ನಿಶಾನೆ ಡಿ 28 ರಲ್ಲಿನ ಪಾಲುಪಟ್ಟಿಯ ಬಗ್ಗೆ ನಾವು ಹೇಳಿಲ್ಲ. ಈಗ ನನಗೆ ತೋರಿಸಿದ ಅವಾರ್ಡ ನೋಟೀಸು ಹಾಗೂ ವರದಿಯನ್ನು ನನ್ನ ಅಜ್ಜಿ ಸಣ್ಣಮ್ಮರವರ ಹೆಸರಿಗೆ ನೀಡಿದೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಿಶಾನೆ ಡಿ 29 ಮತ್ತು 30 ಗುರುತಿಸಲಾಯಿತು. ನನ್ನ ಅಜ್ಜಿ ಸಣ್ಣಮ್ಮ ಮೃತಳಾದ ನಂತರ ಅವರ ವಾರಸುದಾರರು ಎಂದು ಹೇಳಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪಂದಿರಿಬ್ಬರು LAC No. 4/2013 ರಲ್ಲಿ ಪಕ್ಷಕಾರರಾಗಿ ಸೇರ್ಪಡೆಯಾಗಿದ್ದಾರೆ ಎಂದರೆ ಸರಿ.

ನಿಶಾನೆ ಡಿ 22 ರಲ್ಲಿನ ಪಾಲುಪಟ್ಟಿಯಡಿ ನಾಗರಾಜೇಗೌಡರ ಪಾಲಿಗೆ ಬಂದಂತಹ ಸರ್ವೆ ನಂ. 72 ರಲ್ಲಿನ 0.20 ಗುಂಟೆ ಜಮೀನನ್ನು ವರ್ಗಾವರ್ಗಿ ಮೂಲಕ ಹಾರೋಹಳ್ಳಿಯವರಿಗೆ ನೀಡಿ ಪಾಂಡವಪುರ ಗ್ರಾಮದ ಸರ್ವೆ ನಂ. 24/2 ವಿಸ್ತೀರ್ಣ 0.46 ಗುಂಟೆಯನ್ನು ಪಡೆದುಕೊಂಡಿದ್ದರು ಎಂದರೆ ಸರಿ.

ನಿಶಾನೆ ಡಿ 28 ರಲ್ಲಿನ ಪಾಲುಪಟ್ಟಿಯ ಪ್ರಕಾರ ಆಸ್ತಿಗಳ ಹಕ್ಕು ವರ್ಗಾವಣೆ

ಮಾಡಿಕೊಂಡ ಬಗ್ಗೆ ದಾಖಲೆಗಳು ಇವೆ. ನನ್ನ ಚಿಕ್ಕಪ್ಪ ಮನೆಯನ್ನು ನಿಶಾನೆ ಡಿ 1 ರಡಿ ಬಿಟ್ಟುಕೊಟ್ಟಿದ್ದಾರೆ. ನಿಶಾನೆ ಡಿ 1 ರಲ್ಲಿನ ಹಕ್ಕು ಖುಲಾಸೆ ಪತ್ರದಲ್ಲಿ ನಮೂದು ಮಾಡಿರುವ ಪಾಲುಪಟ್ಟಿಯ ದಿನಾಂಕ 17.09.1984 ಆಗಿದೆ. ಸದರಿ ಹಕ್ಕು ಖುಲಾಸೆ ಪತ್ರದಲ್ಲಿ ನಿಶಾನೆ ಡಿ 28 ರಲ್ಲಿನ ದಿನಾಂಕ 10.09.1986 ರ ಪಾಲುಪಟ್ಟಿಯ ಉಲ್ಲೇಖ ಇಲ್ಲ ಎಂದರೆ ಸರಿ. LAC No. 4/2013 ರಲ್ಲಿನ ನನ್ನ ಅಜ್ಜಿ ಸಣ್ಣಮ್ಮರವರ ಪಾಲಿನ ಜಮೀನಿನ ಪರಿಹಾರದ ಹಣವನ್ನು ಹೊಡೆದುಕೊಳ್ಳುವ ಸಲುವಾಗಿ ನಾನು ನಿಶಾನೆ ಡಿ 28 ರಲ್ಲಿನ ದಿನಾಂಕ 10.09.1986 ರ ಪಾಲುಪಟ್ಟಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಜ್ಜಿ ಸಣ್ಣಮ್ಮನ ಹೆಸರಿನಲ್ಲಿದ್ದ ಅಜ್ಜಪಾಲು ಆಸ್ತಿ ಸರ್ವೆ ನಂ. 72 ವಿಸ್ತೀರ್ಣ 0.32 ಕ್ಕೆ ಈ ಕೇಸು ನಡೆಯುತ್ತಿರುವುದು. 1984 ರ ಪಾಲುಪಟ್ಟಿಯ ಪ್ರಕಾರ ಸದರಿ 0.32 ಗುಂಟೆ ಜಮೀನು ನನ್ನ ಅಜ್ಜಿ ಸಣ್ಣಮ್ಮ ಹಾಗೂ ತಾತ ಕರೀಗೌಡರವರ ಮರಣಾ ನಂತರ ನನ್ನ ತಂದೆ ಹಾಗೂ 6 ನೇ ಪ್ರತಿವಾದಿ ನಡುವೆ ಸಮಾನವಾಗಿ ಹಂಚಿಕೆಯಾಗಬೇಕು ಎಂದು ಬರೆಯಲಾಗಿದೆ ಎಂದರೆ ಸರಿ.

ಸರ್ವೆ ನಂ. 72 ರಲ್ಲಿ ಒಟ್ಟು 2 ಎಕರೆ 0.13 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಒಟ್ಟು ವಿಸ್ತೀರ್ಣದ ಪೈಕಿ ನಾರಾಯಣಗೌಡ ಬಿನ್ ಮೋಟೇಗೌಡರು 0.20 ಗುಂಟೆ, ನಮ್ಮ ತಂದೆ ಸಿ ಕೆ ದೇವೇಗೌಡರು 0.15 ಗುಂಟೆ ಹಾಗೂ ನನ್ನ ಚಿಕ್ಕಪ್ಪ ನಾಗರಾಜೇಗೌಡರು 0.20 ಗುಂಟೆ ಹಾಗೂ ನನ್ನ ಅಜ್ಜಿ ಸಣ್ಣಮ್ಮರವರು 0.06 ಗುಂಟೆ ಮತ್ತು 0.32 ಗುಂಟೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಿಶಾನೆ ಡಿ 22 ರಲ್ಲಿ ನನ್ನ ಅಜ್ಜಿ ಸಣ್ಣಮ್ಮರವರು ಖರೀದಿಸಿರುವ ಸ್ವತ್ತುಗಳು ಯಾವ ರೀತಿ ವಿಲೇ ಆಗಬೇಕು ಎಂದು ಬರೆದಿದೆ ಎಂದರೆ ಸರಿ. ನಿಶಾನೆ ಡಿ 17 ನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿ. ಸದರಿ ಆರ್ ಟಿ ಸಿ ಯಲ್ಲಿ ಈಗ ಮೇಲೆ ಹೇಳಿ ಮಾಹಿತಿ ಇದೆ ಎಂದರೆ ಸರಿ. ನನಗೆ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ನಿಶಾನೆ ಡಿ 20 ರಲ್ಲಿರುವ ಎಂ ಆರ್ ನಲ್ಲಿ ನಮೂದಿಸಿರುವ 0.24 ಗುಂಟೆ ಜಮೀನು ಖರಾಬು ಜಮೀನು ಆಗಿರದೆ ಅದು ಸಣ್ಣಮ್ಮರವರ ಹೆಸರಿನ 0.32 ಗುಂಟೆ ಜಮೀನಿಗೆ ಸೇರಿದ 0.24 ಗುಂಟೆ ಜಮೀನು ಆಗಿದೆ ಎಂದರೆ ಸರಿಯಲ್ಲ. ಸದರಿ ಸಣ್ಣಮ್ಮರವರ ಹೆಸರಿನಲ್ಲಿನ 0.32 ಗುಂಟೆ ಜಮೀನಿನ ಪೈಕಿ 0.24 ಗುಂಟೆ ಜಮೀನನ್ನು ಒಳಚರಂಡಿ ವ್ಯವಸ್ಥೆಗೆ ಭೂ ಸ್ವಾಧೀನ ಮಾಡಿಕೊಂಡ ಪ್ರಕಾರ ನಿಶಾನೆ ಡಿ 21 ರಲ್ಲಿನ ಆರ್ ಟಿ ಸಿ ಯಲ್ಲಿ ನಮೂದು ಆಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆ ಸಿ ಕೆ ದೇವೇಗೌಡರಿಗೆ ಮಂಜೂರು ಮಾಡಿರುವ ಒತ್ತುವರಿ ಆದೇಶ ಸಂಖ್ಯೆ 600/91-92 ದಿನಾಂಕ 15.05.1994 ರ ಆದೇಶವನ್ನು ನಿಶಾನೆ ಡಿ 27 ರ ಪ್ರಕಾರ ಉಪ ವಿಭಾಗಾಧಿಕಾರಿಗಳು ರದ್ದು ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 72/1 ರಲ್ಲಿನ 0.32 ಗುಂಟೆ ಜಮೀನಿನ ಬಗ್ಗೆ ನಿಶಾನೆ ಡಿ 28 ರಲ್ಲಿನ ಪಾಲುಪಟ್ಟಿಯಲ್ಲಿ ಉಲ್ಲೇಖ ಆಗಿಲ್ಲ. ನಿಶಾನೆ ಡಿ 22 ರ ಪಾಲುಪಟ್ಟಿ ಪ್ರಕಾರ ಸದರಿ 0.32 ಗುಂಟೆ ಜಮೀನಿನ ಪೈಕಿ ನಮ್ಮ ತಂದೆಗೆ ಹಾಗೂ 6 ನೇ ಪ್ರತಿವಾದಿಗೆ ಸಮಾನ ಭಾಗಾಂಶದ ಹಕ್ಕು ಇದೆ ಎಂದರೆ ಸರಿ. ಭೂ ಸ್ವಾಧೀನಗೊಂಡಿರುವ ಬಗ್ಗೆ ನಕ್ಷೆ ತಯಾರಿಸಲಾಗಿದೆ ಎಂದರೆ ಪುರಸಭೆಯವರು ತಯಾರು ಮಾಡಿದ್ದಾರೆ. ದಿನಾಂಕ 21.04.2025 ರಂದು ಪುರಸಭೆ ಅಧಿಕಾರಿ, ತಹಶೀಲ್ದಾರ್ ಹಾಗೂ ಭೂ ದಾಖಲೆ ಅಧಿಕಾರಿಗಳಿಗೆ ಉಪ ವಿಭಾಗಾಧಿಕಾರಿಯವರು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಆದೇಶ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಿನಾಂಕ 05.03.2025 ರಂದು ಉಪ ವಿಭಾಗಾಧಿಕಾರಿಯವರು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಮಂಡ್ಯರವರಿಗೆ ಪತ್ರ ಬರೆದು ಸಣ್ಣಮ್ಮನ ಸ್ವತ್ತಾದ ಸರ್ವೆ ನಂ. 72/1 ರಲ್ಲಿನ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಕಾಲಾವಕಾಶ ಕೋರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. LAC No. 4/2013 ರಲ್ಲಿನ ಪ್ರಕರಣದಲ್ಲಿ ಪುರಸಭೆ ಮುಖ್ಯಾಧಿಕಾರಿಯವರು ಸಾಕ್ಷ್ಯ ನುಡಿದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಡಿ 22 ರಲ್ಲಿನ ದಿನಾಂಕ 17.09.1984 ರ ಪಾಲುಪಟಿಯನ್ನು ಹೊರತುಪಡಿಸಿ ಬೇರೆ

ಯಾವುದೇ ಪಾಲುಪಟ್ಟಿ ಆಗದೆ ಇದ್ದರೂ ಸಹ 6 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ನಿಶಾನೆ ಡಿ 28 ರಲ್ಲಿನ ಪಾಲುಪಟ್ಟಿಯನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಸಣ್ಣಮ್ಮನಿಗೆ ಸೇರಿದ ಜಮೀನು ಭೂಸ್ವಾಧೀನಗೊಂಡಿದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿ ಪರಿಹಾರ ಹಣವನ್ನು ನಾವು ಪಡೆದುಕೊಂಡಿರುವ ಕಾರಣ ನಮ್ಮ ವಿರುದ್ಧ ಘನ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**